MR. SPEAKER.—Hon. Minister for Parliamentary Affairs must have control over your officers. Take action against an officer who does not send replies to the questions. Keep such officers under suspension for dereliction of their duty. I do support the view expressed by the hon. Member on the opposition.

ಪ್ರೊ|| ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಬೇಗ ಉತ್ತರ ತರಿಸಿಕೊಡುತ್ತೇವೆ.

ಹಿಂದುಳಿದ ಸಂಘದವರಿಗೆ ಜಮೀನನ್ನು ನಿವೇಶನಕ್ಕಾಗಿ ಮಂಜೂರು ಮಾಡಿರುವ ಬಗ್ಗೆ

೮೮ (೩೭೨) ಶ್ರೀ ಕೆ.ಬಿ. ಶಾಣಪ್ಪ (ಶಹಬಾದ್).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಹುಮನಾಬಾದ್ ಪಟ್ಟಣದ ನೀರಿನ ಟ್ಯಾಂಕಿನ ಹತ್ತಿರ ಸರ್ಕಾರಕ್ಕೆ ಸೇರಿದ ೪ ಎಕರೆ ಜಮೀನನ್ನು ಜಿಲ್ಲಾಧಿಕಾರಿಗಳು ಹಿಂದುಳಿದ ಸಂಘದವರಿಗೆ ನಿವೇಶನಕ್ಕಾಗಿ ಮಂಜೂರು ಮಾಡಿರುವುದು ನಿಜವೇ?

ಆ) ಸದರಿ ಸಂಘದ ಸದಸ್ಯರ ಹೆಸರು ಮತ್ತು ಸಂಖ್ಯೆ ಎಷ್ಟು?

ಇ) ಸದರಿ ಸಂಘದಲ್ಲಿ ಕೆಲವೇ ಶ್ರೀಮಂತ ಹಾಗೂ ಅವರ ಸಂಬಂಧಿಕರು ಈ ಸಂಘದ ಸದಸ್ಯರಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಸದರಿ ಸಂಘದಲ್ಲಿನ ಕೆಲವು ಸದಸ್ಯರು ನಿವೇಶನಗಳನ್ನು ಈಗಾಗಲೇ ಬೇರೆಯವರಿಗೆ ಮಾರಾಟ ಮಾಡಿ ಸಾಕಷ್ಟು ಹಣ ಪಡೆದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಉ) ಸದರಿ ಜಮೀನಿನಲ್ಲಿ ಈಗ್ಗೆ ಸಾಕಷ್ಟು ವರ್ಷಗಳಿಂದ ಹಿಂದುಳಿದ ಹಾಗೂ ಹರಿಜನ-ಗಿರಿಜನ ಕುಟುಂಬಕ್ಕೆ ಸೇರಿದವರು ಗುಡಿಸಲು ಹಾಕಿಕೊಂಡು ವಾಸವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ) ಹೌದು.

ಆ) ಪಟ್ಟಿಯನ್ನು ಲಗತ್ತಿಸಿದೆ—ಸದಸ್ಯರ ಸಂಖ್ಯೆ ೬೦.

ಇ) ಇಲ್ಲ.

ಈ) ಇಲ್ಲ.

ಉ) ಹೌದು.

List of the members of the Backward Class Housing Co-operative Society, Humnabad is as follows:—

Name

1) Subhash Mati Rao Astikar
2) Tulsiram Mati Rao
3) Nimala Subhash
4) Vivekanand Manik Rao Doijade
5) Manohar Rao Mahendraker
6) Ramachander Gopal Rao

7) Vasudev Ragloji
8) Nagaraj Gopal Rao
9) Chandrakant Tulsiram
10) Narayan Rao Jaijee
11) Manjunath Narayan Rao
12) Raju Narayan Rao
13) Manik Sangayya Bajgal
14) Vaijnath Gundappa
15) Anil Narayana Rao
16) Vasudev Nagaiah
17) Siddappa Vasudev
18) Narottam Vasudev Udgir
19) Veejibai Jeevanagiker
20) Vishwanath Ramachandra Rao
21) Dattatri Manik Rao Arya
22) Mohan Rao Manik Rao
23) Rameshwar Manik Rao
24) Devidas Sapun Rao Kolikar
25) Vittal Rao Shankar Rao Patange
26) Asha Vithal Rao
27) Riyasat Begum Sy. Kareem
28) Mohan Rao Ram Rao
29) Arusuya Jaganath Chidri
30) Subhash Gunde Rao
31) Suneetha Mohan Rao
32) Anil Gunde Rao
33) Vasantha Rao Govind Rao
34) Dattatri Gunde Rao
35) Laxman Veerappa
36) Veeranappa Narayan Rao
37) Basappa Dasharatha Rao
38) Venkat Rao Sangayya
39) Umakanth Ramachandar Rao
40) Ramoji Rao Dattu Rao
41) Nanda Kumar Dattu Rao
42) Rathnakumar Ramachandar Rao

43) Vaman Rao Mukund Rao
44) Devidas Jaiwath Rao
45) Manik Rao Gundappa Valse
46) Dattu Rao Ntrayan Rao Valse
47) Mahesh Manik Rao
48) Maruthi Rao Govinda Rao
49) S.R. Pawar
50) Digamber Narayan Rao
51) Kasharabai Jaganath Rao
52) Ramesh Laxaman Rao
53) Shivraj Nagappa
54) Sudershan Sham Rao Ghawalkar
25) Prakash Laxman Rao
56) Suresh Laxman Rao Ghawalkar
57) Rajendra Laxman Rao
58) Manohar Rao Laxman Rao
59) Mahesh Monappa

ಶ್ರೀ ಕೆ.ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯನ್ನು ನಾನು ಕೇಳಿರತಕ್ಕ ಉದ್ದೇಶ ವಾದರೂ ಇಷ್ಟೇ. ಬ್ಯಾಕ್‌ವರ್ಡ್ ಕ್ಲಾಸ್ ಸಂಘದ ಹೆಸರಿನಲ್ಲಿ ೩೦೦ ಎಕರೆ ಮೇಲ್ಪಟ್ಟು ಈ ಜಮೀನು ಇದೆ. ಇದು ಹುಮ್ನಾಬಾದ್ ಪಟ್ಟಣದ ನೀರಿನ ಟ್ಯಾಂಕ್‌ನ ಹತ್ತಿರದ ೪ ಎಕರೆ ಜಮೀನಿನಲ್ಲಿ ಬಡವರು ಜೋಪಡಿಗಳನ್ನು ಹಾಕಿಕೊಂಡು ಸುಮಾರು ೧೫-೨೦ ವರ್ಷಗಳಿಂದಲೂ ಅಲ್ಲಿ ವಾಸ ಮಾಡುತ್ತಿದ್ದಾರೆ. ಈ ಜಾಗದಲ್ಲಿ ನಾವು ವಾಸ ಮಾಡುತ್ತಿದ್ದೇವೆ, ಇದನ್ನು ನಮಗೆ ಮಂಜೂರು ಮಾಡಿಕೊಡಬೇಕೆಂದು ಆ ಜನರು ಜಿಲ್ಲಾಧಿಕಾರಿಯವರನ್ನು ಪ್ರಾರ್ಥನೆ ಮಾಡಿದರು. ನಂತರ ಅವರು ನಮ್ಮ ಹತ್ತಿರ ಬಂದಾಗ ನಾವು ನಿಮಗೆ ಪ್ರೊಟೆಕ್ಷನ್ ಕೊಡುತ್ತೇವೆಂದು ಹೇಳಿದ್ದೇವೆ. ಈಗ ಅಲ್ಲಿ ಅಂದರೆ ೪ ಎಕರೆಯಲ್ಲಿ ಹರಿಜನರು ಏನು ಗುಡಿಸಲುಗಳನ್ನು ಕಟ್ಟಿಕೊಂಡಿದ್ದಾರೆ ಅದನ್ನು ಅವರಿಗೇ ಕೊಡಬೇಕು. ಆದರೆ ಕೆಲವು ಶ್ರೀಮಂತರು ಅಲ್ಲಿರತಕ್ಕ ಈ ಜನರಿಗೆ ೩-೪ ಸಾವಿರ ರೂಪಾಯಿಗಳನ್ನು ಕೊಟ್ಟು ಅವರು ಇದ್ದಂಥ ಜಾಗವನ್ನು ಬಿಡಿಸಿದ್ದಾರೆ ಮತ್ತು ಬೇರೆಯವರಿಗೆ ೨೫ ಸಾವಿರ ರೂಪಾಯಿಗಳಿಗೆ ಅದನ್ನು ಮಾರಾಟ ಮಾಡಲು ಹೊರಟಿದ್ದಾರೆ. ಒಂದೇ ಪಾರ್ಟಿಯ ಜನರು ಲಕ್ಷಾಂತರ ರೂಪಾಯಿಗಳನ್ನು ಮ್ಯಾನ್ಯುಪುಲೇಟ್ ಮಾಡುತ್ತಿದ್ದಾರೆ. They have manipulated to see that this land belongs to them and they are distributing the plot at higher rate to others. ಇವರೆಲ್ಲಾ ದೊಡ್ಡ ದೊಡ್ಡ ಶ್ರೀಮಂತರು. ಅವರು ಸೊಸೈಟಿಯ ಹೆಸರಿನಲ್ಲಿ ಈ ಜಮೀನನ್ನು ಬೇರೆ ದಿವಾಡಿ ಬೇರೆಯವರಿಗೆ ಮಾರಾಟ ಮಾಡುತ್ತಿದ್ದಾರೆ. ನಾನು ಹೇಳುತ್ತಿರುವುದರಲ್ಲಿ ತಮಗೆ ನಂಬಿಕೆ ಇಲ್ಲದಿದ್ದರೆ ಸಂಬಂಧ ಪಟ್ಟವರಿಂದ ಪೂರ್ಣ ವಿವರಗಳನ್ನು ತರಿಸಿನೋಡಿ.

ಶ್ರೀ ವೀರಣ್ಣ.—೧೨ ಕುಟುಂಬದ ಹರಿಜನ ಗಿರಿಜನರು ೧೫ ವರ್ಷಗಳಿಂದ ಅಲ್ಲಿ ವಾಸ ಮಾಡು ತ್ತಿದ್ದಾರೆಂದು ಜಿಲ್ಲಾಧಿಕಾರಿಗಳು ರಿಪೋರ್ಟ್ ಕೊಟ್ಟಿದ್ದಾರೆ. ಸೊಸೈಟಿಗೆ ೪ ಎಕರೆ ಚಿಲ್ಲರೆ ಅಲ್ಲಿಯ ಜಿಲ್ಲಾಧಿಕಾರಿಯವರಿಂದ ಮಂಜೂರಾಗಿದೆ. ಈಗ ಅದು ಡಿಸ್‌ಪ್ಯೂಟ್‌ನಲ್ಲಿರುವುದರಿಂದ ಹುಮ್ನಾಬಾದ್ ಮುನ್ಸೀಫ್ ಕೋರ್ಟಿನಲ್ಲಿ ಪೆಂಡಿಂಗ್ ಇದೆ. ಇದು ತೀರ್ಮಾನವಾದಮೇಲೆ ಹರಿಜನ ಗಿರಿಜನರ ಬಗ್ಗೆ ಸಹಾನುಭೂತಿಯಿಂದ ಕ್ರಮ ತೆಗೆದುಕೊಳ್ಳುತ್ತೇವೆ

ಶ್ರೀ ಕೆ. ಬಿ. ಶಾಣಪ್ಪ.—ಅವರು ಗುಡಿಸಲುಗಳನ್ನು ಕಟ್ಟಿಕೊಳ್ಳುವುದಕ್ಕೆ ಆ ಜಾಗವನ್ನು ಕೋ–ಆಪರೇಟಿವ್ ಮೂವ್‌ಮೆಂಟ್‌ನಲ್ಲಿ ಕೊಟ್ಟಿದ್ದಾರೆ. ೪ ಎಕರೆ ಜಮೀನನ್ನು ಸೊಸೈಟಿಯ ಹೆಸರಿನಲ್ಲಿ ಅವರು ತೆಗೆದುಕೊಂಡಿದ್ದಾರೆ. ಇದು ಸರ್ಕಾರೀ ಜಮೀನು. ಯಾರು ಯಾರಿಗೆ ನುನೆ ಇಲ್ಲ, ಯಾರು ಯಾರಿಗೆ ನಿವೇಶನ ಇಲ್ಲ ಅಂಥವರಿಗೆ ಕೊಡಬೇಕು. ಅಲ್ಲಿ ಈ ಸಂಘದ ದೊಡ್ಡ ದೊಡ್ಡ ಶ್ರೀಮಂತರು ಇದ್ದಾರೆ. ಅವರು ಏನು ಮಾಡುತ್ತಿದ್ದಾರೆಂದರೆ ಈ ಜಮೀನನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತಿದ್ದಾರೆ. ಆದ್ದರಿಂದ ತಾವು ಈ ೪ ಎಕರೆ ಜಮೀನನ್ನೂ ವಾಪಸು ತೆಗೆದುಕೊಂಡು ಅಲ್ಲಿ ಹರಿಜನ ಗಿರಿಜನರು ಮನೆಗಳನ್ನು ಕಟ್ಟಿಕೊಂಡು ವಾಸಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವೀರಣ್ಣ.—ಗ್ರಾಂಟಿಂಗ್ ಕಂಡೀಷನ್‌ಗಳನ್ನು ಅವರು ಏನಾದರೂ ಉಲ್ಲಂಘನೆ ಮಾಡಿದ್ದರೆ if the grantee violates the condition of the grant and if it comes to the notice of the Government, certainly we will take action to cancel the grant. ಹರಿಜನ ಗಿರಿಜನರ ಹಿತಾಸಕ್ತಿಗೆ ಧಕ್ಕೆ ಬರದೇ ಇರತಕ್ಕ ರೀತಿಯಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಕೆ.ಬಿ. ಶಾಣಪ್ಪ.—ಎನ್‌ಕ್ವೈರಿ ಮಾಡುವುದಕ್ಕೆ ಯಾವ ರೀತಿ ಮಾಡುತ್ತೀರಿ? How are you going to enquire? What is the yardstick you are going to adopt?

ಶ್ರೀ ವೀರಣ್ಣ.—ಸರ್ಕಾರ ಯಾವುದೇ ಜಮೀನನ್ನಾಗಲಿ ಗ್ರಾಂಟ್ ಮಾಡಬೇಕಾದರೆ ಕೆಲವು ಕಂಡೀಷನ್‌ಗಳ ಮೇಲೆ ಮಾಡಿ, ಇಂಥಿಂಥ ಉದ್ದೇಶಗಳಿಗಾಗಿ ಎಂದು ತಿಳಿಸಿರುತ್ತಾರೆ. I will direct the Deputy Commissioner to look into the matter and ascertain whether the grantee has violated the conditions of the grant.

ಉತ್ತರ ಕನ್ನಡ ಜಿಲ್ಲೆಯಲ್ಲಿ ಬರಗಾಲಕ್ಕೆ ತುತ್ತಾಗಿರುವ ರೈತರ ಬಗ್ಗೆ

೮೯ (೮) ಶ್ರೀ ಗೋಪಾಲ ಮುಕುಂದ ಕಾನಡೆ (ಸಿರಸಿ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಮಳೆ ಇಲ್ಲದೆ ಬರಗಾಲಕ್ಕೆ ತುತ್ತಾಗಿ ರೈತರಿಗೆ, ಜಾನುವಾರುಗಳಿಗೆ ತೊಂದರೆಯಾಗಿರುವುದು ಸರ್ಕಾರದವರು ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸದರೀ ಜಿಲ್ಲೆಯನ್ನು ಬರಗಾಲ ಪ್ರದೇಶವೆಂದು ಘೋಷಿಸಲು ಸರ್ಕಾರದವರು ಉದ್ದೇಶಿಸುವರೇ ?

ಇ) ಹಾಗಿಲ್ಲದಿದ್ದಲ್ಲಿ, ಇದಕ್ಕೆ ಕಾರಣಗಳೇನು ಹಾಗೂ ಈಗಲಾದರೂ ಬರಗಾಲ ಪ್ರದೇಶವೆಂದು ಘೋಷಿಸಿ ರೈತರಿಗೆ ಬರಗಾಲ ಕಾಮಗಾರಿ ಕೆಲಸಗಳನ್ನು ಪ್ರಾರಂಭಿಸಿ ಜಾನುವಾರುಗಳಿಗೆ ಮೇವಿನ ಹಾಗೂ ಇತರೆ ಅನುಕೂಲತೆಗಳನ್ನು ಒದಗಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ) ಹೌದು.

ಆ) ಉತ್ತರ ಕನ್ನಡ ಜಿಲ್ಲೆಯ ಸಿರ್ಸಿ, ಹಳಿಯಾಳ ಮತ್ತು ಮುಂಡಗೋಡ ತಾಲ್ಲೂಕುಗಳನ್ನು ಅಭಾವ ಪೀಡಿತ ಪ್ರದೇಶಗಳೆಂದು ಗುರುತಿಸಲಾಗಿದೆ.

ಇ) "ಆ" ಪ್ರಶ್ನೆಗೆ ಒದಗಿಸಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ. ಅಭಾವ ಪೀಡಿತವೆಂದು ಪರಿಗಣಿಸಲಾದ ತಾಲ್ಲೂಕುಗಳಾದ ಸಿರ್ಸಿ, ಹಳಿಯಾಳ ಮತ್ತು ಮುಂಡಗೋಡ ತಾಲ್ಲೂಕುಗಳಲ್ಲಿ ಬಾಧಿತ ಜನ ಹಾಗೂ ಜಾನುವಾರುಗಳಿಗೆ ಪರಿಹಾರ ಒದಗಿಸುವ ದಿಸೆಯಲ್ಲಿ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

೯.೩೦. ಎ.ಎಂ.

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರವನ್ನು ಕೊಡಲು ಸಂಬಂಧಪಟ್ಟ ಮಂತ್ರಿಗಳೇ ಇಲ್ಲ.

ಅಧ್ಯಕ್ಷರು.—ಮಾನ್ಯ ಕಾನಡೆಯವರೇ ತಮಗೆ ಗೊತ್ತಿರುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಬರಗಾಲದ ಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡಲು ದೆಹಲಿಗೆ ಹೋಗಿದ್ದಾರೆ. ಮಾನ್ಯ ವೀರಣ್ಣನವರು ಫೈಲ್ ತರಿಸಿಕೊಂಡು ಸ್ಟಡಿ ಮಾಡಿ ಬಂದಿರುತ್ತಾರೆ. ತಾವು ಪ್ರಶ್ನೆ ಕೇಳಿ ಉತ್ತರವನ್ನು ಕೊಡುತ್ತಾರೆ.

ಶ್ರೀ ವೀರಣ್ಣ. ಮುಖ್ಯ ಮಂತ್ರಿಗಳು ಇಲ್ಲ ಎನ್ನುವುದು ಪ್ರಶ್ನೆಯಲ್ಲ. ನೂರು ಪ್ರಶ್ನೆಗಳನ್ನು ಮಾನ್ಯ ಸದಸ್ಯರು ಕೇಳಲಿ ಉತ್ತರವನ್ನು ಕೊಡುತ್ತೇನೆ. ಮತ್ತೆ ಉತ್ತರ ಕನ್ನಡ ಜಿಲ್ಲೆಗೆ ಎಷ್ಟು ಹಣವನ್ನು ಏಪ್ರಿಲ್ ತಿಂಗಳಲ್ಲಿ ರಿಲೀಸ್ ಮಾಡಿದ್ದೇವೆ ಎನ್ನುವುದನ್ನು ಕೂಡ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಉತ್ತರ ಕನ್ನಡ ಜಿಲ್ಲೆಗೆ ೩೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೇ, ನಮ್ಮ ಉತ್ತರ ಕನ್ನಡ ಜಿಲ್ಲೆಯನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಿದ್ದೇವೆಂದು ಹೇಳಿದ್ದಾರೆ. ಆದರೆ ನಮ್ಮ ಶಿದ್ದಾಪುರವನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಿಲ್ಲ, ಘೋಷಿಸಬೇಕು. ಮತ್ತೆ ಬರಗಾಲದ ಸಲುವಾಗಿ ದನಕರುಗಳಿಗೆ ಮೇವು, ರೈತರಿಗೆ ಪರಿಹಾರವೆಂದು ತಲಾ ೫ ರೂಪಾಯಿಗಳನ್ನು ಕೊಡುತ್ತಿದ್ದೀರಿ, ಈ ಐದು ರೂಪಾಯಿಗಳನ್ನು ಕೊಡುತ್ತಿರುವುದು ಕೆಲಸ ಮಾಡಿದ್ದಕ್ಕೆ ಪರಿಹಾರವೆ ಏನು ಎನ್ನುವುದು ಒಂದು, ಎರಡನೆಯದಾಗಿ ರೈತರು ಸಂಘ ಸಂಸ್ಥೆಗಳಿಂದ ಸಾಲವನ್ನು ತೆಗೆದುಕೊಳ್ಳುತ್ತಿರುತ್ತಾರೆ. ಈ ಸಂಘ ಸಂಸ್ಥೆಗಳು ಅವರು ತೆಗೆದುಕೊಂಡ ಸಾಲಕ್ಕೆ ಅವರನ್ನೇ ಜವಾಬ್ದಾರರನ್ನಾಗಿ ಮಾಡಿದ್ದಾರೆ. ಹೀಗೆ ರೈತರ ಭೂಮಿ ಒಳಗೊಂಡಿರತಕ್ಕಂಥದ್ದು ಎಷ್ಟು ? ಇದಕ್ಕೇನಾದರೂ ಬಿಗಿ ಕ್ರಮ ಹಾಕಿದ್ದೀರಾ ? ಬೆಳೆ ಮಾಡಬೇಕಾದರೆ ಇನ್‌ಷ್ಯೂರೆನ್ಸ್ ಮಾಡತಕ್ಕಂಥ ವ್ಯವಸ್ಥೆ ಇರುತ್ತದೆ. ನಾಲ್ಕೈದು ವರ್ಷಗಳಿಂದ ಸಿರಸಿ, ಮತ್ತು ಶಿದ್ದಾಪುರ, ಮುಂಡಗೋಡ ಗಳಿಗೆ ಬೆಳೆ ಇನ್‌ಷೂರೆನ್ಸ್ ಸಿಕ್ಕಿಲ್ಲ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೂ ಉತ್ತರ ಕನ್ನಡ ಜಿಲ್ಲೆಗೆ ರಿಲೀಸ್ ಮಾಡಿರುವ ಹಣ, ಮೇವಿಗಾಗಿ ಎಷ್ಟೂರು ಲಕ್ಷ ರೂಪಾಯಿಗಳು ಕುಡಿಯುತಕ್ಕಂಥ ನೀರಿಗಾಗಿ ೧೧ ಲಕ್ಷ ೫೦ ಸಾವಿರ ರೂಪಾಯಿಗಳು ಮತ್ತೆ ಗ್ರಾಮ ನೀರು ಸರಬರಾಜು ಯೋಜನೆಗಾಗಿ ೨೨ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ರೈತರಿಗೋಸ್ಕರವಾಗಿ ಬೀಜ ಮತ್ತು ಗೊಬ್ಬರ ಹಂಚಲಿಕ್ಕೆ ೮ ಲಕ್ಷ ರೂಪಾಯಿಗಳನ್ನು, ಈ ಎಲ್ಲಾ ಸೌಕರ್ಯಗಳನ್ನು ಕಲ್ಪಿಸುವುದಕ್ಕಾಗಿ ೩೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಮಾನ್ಯ ಸದಸ್ಯರು ಹೇಳಿದರು ಶಿದ್ದಾಪುರ ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶವೆಂದು ತೀರ್ಮಾನ ಮಾಡಿಲ್ಲವೆಂದು ವರದಿಯನ್ನು ತರಿಸಿಕೊಂಡು ಬಹುಶಃ ಯಾವ ರೀತಿ ಕಾನೂನು ಪ್ರಕಾರ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕೋ ಆ ಪ್ರಕಾರ ತೆಗೆದು ಕೊಳ್ಳುತ್ತೇವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಿರುವುದನ್ನು ನೋಡಿದರೆ ತಲೆ ಚಕ್ಕರ್ ಬರುತ್ತದೆ. ನೀರಿಗಾಗಿ ಎಷ್ಟು ಹಣವನ್ನು ಕೊಟ್ಟಿದ್ದೀರಿ ಎಂದು ಕೇಳಿದರೆ ಮಾಡಿದ್ದೇವೆ, ಮಾಡುತ್ತೇವೆಂದು ಹೇಳುತ್ತಿರುತ್ತಾರೆ,

ಶ್ರೀ ವೀರಣ್ಣ.—ಹಣವನ್ನು ರಿಲೀಸ್ ಮಾಡಿರತಕ್ಕಂಥ ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಜಿಲ್ಲಾಪರಿಷತ್ತಿಗೆ ತಿಳಿಸಲಾಗಿದೆಯೋ ಅದರ ಪ್ರಕಾರವಾಗಿ ಕೆಲಸಗಳು ಆಗುತ್ತಿದೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೇ ನಾನು ಕಾಂಗ್ರೆಸ್ ಎಂ.ಎಲ್.ಎ. ಪಕ್ಕದ ಕ್ಷೇತ್ರದಲ್ಲಿರತಕ್ಕಂಥ ಅಜ್ಜಿಬಾಳ್ ಹೆಗಡೆಯವರು ಎಷ್ಟು ಜನರಿಗೆ ಕೆಲಸಗಳನ್ನು ಒದಗಿಸಿದ್ದಾರೆ, ಎಷ್ಟು ಬಾವಿಗಳನ್ನು ತೆಗೆಸಿದ್ದಾರೆ ?

ಅಧ್ಯಕ್ಷರು.—ಇದು ಮೂಲ ಪ್ರಶ್ನೆಗೆ ಸಂಬಂಧಪಟ್ಟಿಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೇ ಏನೂ ಕೆಲಸ ಮಾಡಿಲ್ಲ. ಕಾಗದ ಇಟ್ಟುಕೊಂಡು ಓದುತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಏನೇನು ಕೆಲಸವಾಗಿಲ್ಲ. ಯಾವುದೋ ರೋಡಿಗೆ ಎರಡು ಬುಟ್ಟಿ ಮೂರು ಬುಟ್ಟಿ ಮಣ್ಣು ಹಾಕತಕ್ಕಂಥ ಕೆಲಸ ನಡೆಯುತ್ತಿದೆ. ರೈತರಿಗೆ ಬೀಜವನ್ನು ಕೊಟ್ಟಿಲ್ಲ. ಇದು ಜಿಲ್ಲಾ ಪರಿಷತ್ತಿಗೆ ಹೋಗಿದೆ ಎಂದು ಹೇಳುತ್ತೀರಿ. ಜಿಲ್ಲಾ ಪರಿಷತ್ ಕೇಳಿದರೆ ದುಡ್ಡು ಕೊಟ್ಟಿಲ್ಲವೆಂದು ಹೇಳುತ್ತಾರೆ. ಪಿ.ಡಬ್ಲ್ಯು.ಡಿ. ಬಿಲ್‌ಗಳು ವಾಪಸ್ ಬರುತ್ತಿವೆ. ಲಕ್ಷಗಟ್ಟಲೇ ಹಣ ಕೊಟ್ಟಿರುತ್ತೇವೆಂದು ಹೇಳುತ್ತಿದ್ದೀರಿ. ಅವರು ಹೇಳುವುದು ನೋಡಿದರೆ ಏನೋ ಒಂದು ರೀತಿಯಾಗುತ್ತಿದೆ ಅಲ್ಲಿ ಒಂದು ಪೈಸೆ ಕೆಲಸ ಆಗುತ್ತಿಲ್ಲ.

ಅಧ್ಯಕ್ಷರು.—ಭಾಷಣ ಮಾಡುವುದು ಬೇಡ. ನಿಮ್ಮ ಪ್ರಶ್ನೆಗೆ ಮಾತ್ರ ಉಪ ಪ್ರಶ್ನೆಯನ್ನು ಸೀಮಿತಗೊಳಿಸಿ ಏನು ಆಗಬೇಕು ಅದನ್ನು ಕೇಳಿ ?

ಶ್ರೀ ಗೋಪಾಲ ಮುಕುಂದ ಕಾನಡೆ.—ರೈತರಿಗೆ ಬೀಜ ಗೊಬ್ಬರ ಕೊಟ್ಟಿದ್ದೇವೆ ಎನ್ನುತ್ತಾರೆ. ಬೀಜವನ್ನೂ ಕೊಟ್ಟಿಲ್ಲ, ಗೊಬ್ಬರವನ್ನೂ ಕೊಟ್ಟಿಲ್ಲ; ನೀರೂ ಕೊಟ್ಟಿಲ್ಲ. ಎಂ.ಎಲ್.ಎ. ಮನೆ ಹತ್ತಿರ ಒಂದು ಬೋರ್ ಹೊಡೆಸುವುದಕ್ಕೆ ಆಗಿಲ್ಲ.

ಶ್ರೀ ವೀರಣ್ಣ.—ಎಲ್ಲರ ಮನೆ ಹತ್ತಿರ ಬೋರ್ ಹಾಕಿಸುವುದಕ್ಕಾಗುವುದಿಲ್ಲ. ನಾನು ಮಂತ್ರಿಯಾಗಿದ್ದೇನೆ, ನೀವು ಸದಸ್ಯರಾಗಿದ್ದೀರಿ, ನೀವು ಇಚ್ಛೆಪಟ್ಟರೆ ನಿಮ್ಮ ಮನೆ ಹತ್ತಿರ ಬೋರ್ ಹಾಕಿಸುವುದಕ್ಕಾಗುವುದಿಲ್ಲ. ಜಿಯಾಲಜಿಸ್ಟ್ ಎಲ್ಲಿ ನೀರು ಸಿಗುತ್ತದೆಂದು ಹೇಳುತ್ತಾರೋ ಅಲ್ಲಿ ಹಾಕುತ್ತೇವೆ.

ಅಧ್ಯಕ್ಷರು.—ನಿಮಗೆ ಮೂರು ಸಾರಿ ಅವಕಾಶ ಕೊಟ್ಟಿದ್ದೇನೆ. ಮತ್ತೆ ಕೊಡುವುದಕ್ಕಾಗುವುದಿಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ.—ಮಂತ್ರಿಗಳ ಮನೆ ಮುಂದೆ ಬೋರ್ ಹೊಡೆದು ಕೊಂಡರೆ ಬೇಡ ಎನ್ನುವುದಿಲ್ಲ. ನಮ್ಮ ಮನೆ ಹತ್ತಿರ ಬೋರ್‌ವೆಲ್.....

ಶ್ರೀ ವೀರಣ್ಣ.—ಮಾನ್ಯ ಕಾನಡೆಯವರ ಮನೆ ಹತ್ತಿರ ಸರ್ವೆ ಮಾಡಿಸುತ್ತೇನೆ. ಅಲ್ಲಿ ನೀರು ಸಿಗುತ್ತದೆಂದರೆ ಅಲ್ಲೇ ಬೋರ್ ಹಾಕಿಸುತ್ತೇನೆ.

ಶ್ರೀ ಆರ್. ಎನ್. ನಾಯಕ್ —ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ, ಮುಂಡಗೋಡು, ಸಿರಸಿ, ಯಲ್ಲಾಪುರ ಈ ಭಾಗಗಳನ್ನು ಬರಗಾಲ ಪೀಡಿತ ಪ್ರದೇಶಗಳೆಂದು ಸಾರಿದರು. ಆ ಭಾಗದಲ್ಲಿ ಮಳೆ ಕಡಿಮೆ ಆಯಿತು ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಅದೇ ರೀತಿ ಮಳೆ ಕಡಿಮೆಯಾದಂತಹ ಕರಾವಳಿ ತಾಲ್ಲೂಕುಗಳಾದ ಕಾರವಾರ, ಅಂಕೋಲ, ಕುಮಟಾ, ಹೊನ್ನಾವರ, ಭಟ್ಕಳ್ ಈ ಭಾಗಗಳಲ್ಲಿ ಸಾಕಷ್ಟು ಫಜನಿ ಭೂಮಿ ಇದೆ. ಫಜನಿ ಭೂಮಿಯಲ್ಲಿ ಬಿತ್ತಿದ ಸಸಿಗಳೆಲ್ಲ ನಾಶವಾಗಿವೆ. ಅಲ್ಲಿ ಒಂದೇ ಬೆಳೆ ಬೆಳೆಯುವುದು. ಅಂಥ ಪ್ರದೇಶಗಳಿಗೆ ನೀವು ಏನು ಪರಿಹಾರ ಒದಗಿಸುತ್ತೀರಿ ? ಆ ಪ್ರದೇಶಗಳನ್ನು ಬರಗಾಲ ಎಂದು ಸಾರುತ್ತೀರಾ ?

ಶ್ರೀ ವೀರಣ್ಣ.—ಮಾನ್ಯ ಕಾನಡೆಯವರು ಸಿದ್ದಾಪುರವನ್ನು ಬರಗಾಲ ಪೀಡಿತ ಪ್ರದೇಶ ಎಂದು ತೀರ್ಮಾನಿಸಿ ಎಂದು ಹೇಳಿದರು. ಅದೇ ರೀತಿ ಭಟ್ಕಲ್ ಅನ್ನು ಏತಕ್ಕೆ ಬರಗಾಲ ಪೀಡಿತ ಪ್ರದೇಶ ಎಂದು ಸಾರಬಾರದೆಂಬುದು ನಾಯಕ್ ಅವರ ಉದ್ದೇಶ.

ಶ್ರೀ ಆರ್.ಎನ್. ನಾಯಕ್.—ನಮ್ಮ ಉದ್ದೇಶ ಅದಲ್ಲ.

ಶ್ರೀ ವೀರಣ್ಣ.—ಫಜನಿ ಭೂಮಿ ಎಂದರೆ ತಗ್ಗಾದ ಪ್ರದೇಶ ಎಂದು. ಅಲ್ಲಿ ನೀರು ಬಂದು ಬೆಳೆ ಹೋಗಿರುವುದರಿಂದ ಅಲ್ಲಿನ ರೈತರಿಗೆ ಪರಿಹಾರ ಕೊಡುವ ಕ್ರಮ ಕೈಗೊಳ್ಳುತ್ತೀರಾ ಅಥವಾ ಬರ ಪೀಡಿತ ಪ್ರದೇಶ ಎಂದು ಸಾರುತ್ತೀರಾ ಎಂದು ಕೇಳುತ್ತಿದ್ದಾರೆ. ಆ ಬಗ್ಗೆ ಅಧಿಕಾರಿಗಳ ಹತ್ತಿರ ವರದಿ ತರಿಸಿ ಹಾಗೇನಾದರೂ ಇದ್ದರೆ ಪರಿಹಾರ ಕೊಡಲಿಕ್ಕೆ ತೀರ್ಪ್ರವಾಗಿ ಯೋಚಿಸುತ್ತೇವೆ.

(ಶ್ರೀ ಆರ್. ಎನ್. ನಾಯಕ್ ಅವರು ಮಾತನಾಡಲಾರಂಭಿಸಿದರು)

ಅಧ್ಯಕ್ಷರು.—ನಿಮಗೆ ಮತ್ತೇ ಅವಕಾಶ ಕೊಡುವುದಿಲ್ಲ. ನೀವು ಆಡುವ ಮಾತುಗಳು ರೆಕಾರ್ಡ್ ಆಗುವುದಿಲ್ಲ.

ಶ್ರೀ ಪಿ. ಎಸ್. ರಾಣೆ.—ಮಾನ್ಯ ಸಚಿವರು ಹಳೇವಾಳ, ಮುಂಡಗೋಡು, ಸಿರಸಿ ಇವನ್ನು ಬರಗಾಲ ಪೀಡಿತ ಪ್ರದೇಶಗಳೆಂದು ಸಾರಿದ್ದೇವೆಂದು ಹೇಳಿದ್ದಾರೆ. ಘಟ್ಟದ ಮೇಲಿನ ಸೂಪಾ ತಾಲ್ಲೂಕನ್ನು ಸಹ ಭಾಗಶಃ ಬರಗಾಲ ಪೀಡಿತ ಪ್ರದೇಶ ಎಂದು ಸಾರಬೇಕಾಗಿತ್ತು. ಏತಕ್ಕೆ ಸಾರಲಿಲ್ಲ? ಅದರ ಬಗ್ಗೆ ಕ್ರಮ ಕೈಗೊಳ್ಳುತ್ತೀರಾ? ಬರಗಾಲ ಪರಿಹಾರಕ್ಕಾಗಿ ಲಕ್ಷಗಟ್ಟಲೆ ದುಡ್ಡನ್ನು ಬಿಡುಗಡೆ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಮೇವಿಗಾಗಿ ೩ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳುತ್ತಾರೆ. ಆ ಮೇವು ಎಲ್ಲಿಗೆ ಹೋಯಿತು ಎಂದು ಗೊತ್ತಿಲ್ಲ. ಬರಗಾಲ ಪೀಡಿತ ಪರಿಹಾರ ಕಾರ್ಯ ಕ್ರಮಗಳು ಏನಿವೆ ಅವುಗಳಲ್ಲಿ ಬಹಳಷ್ಟು ಅವ್ಯವಹಾರ ನಡೆದಿದೆ ಎಂದು ಸಂಶಯ ಬರುತ್ತದೆ. ಈ ಬರಗಾಲವೆಂಬುದು ಕೇವಲ ಜನತಾ ಪಕ್ಷದ ಕಾರ್ಯಕರ್ತರಿಗೆ ಮಾತ್ರ ಬರುತ್ತದೆಯೋ ಅಥವಾ ಎಲ್ಲಾ ಜನರಿಗೆ ಬರುತ್ತದೆಯೊ?

ಅಧ್ಯಕ್ಷರು.—ನೇರವಾಗಿ ಪ್ರಶ್ನೆ ಕೇಳಿ.

ಶ್ರೀ ಪಿ. ಎಸ್. ರಾಣೆ.—ಬರಗಾಲ ಪರಿಹಾರ ಕಾರ್ಯಕ್ರಮ ಕೇವಲ ಜನತಾ ಪಕ್ಷದವರಿಗೆ ಅನ್ವಯವಾಗುತ್ತದೆಯೋ ಅಥವಾ ಎಲ್ಲಾ ಜನರಿಗೆ ಸಂಬಂಧಪಡುತ್ತದೆಯೆ ?

ಅಧ್ಯಕ್ಷರು.—ಇದು ಒಳ್ಳೆಯದಲ್ಲ. ಅವಕಾಶ ಕೊಟ್ಟರೆ ದುರುಪಯೋಗ ಮಾಡಿಕೊಳ್ಳುತ್ತೀರಿ.

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಇರತಕ್ಕ ತಾಲ್ಲೂಕುಗಳನ್ನು ಸಮಗ್ರವಾಗಿ ಸರ್ವೆಮಾಡಿ ರಿಪೋರ್ಟ್ ತರಿಸಿ ಸೂಕ್ತವಾಗಿರತಕ್ಕ ಕ್ರಮ ಕೈಗೊಳ್ಳುತ್ತೇನೆ. ಯಾವ ಯಾವ ತಾಲ್ಲೂಕು ಬರಪೀಡಿತವಾಗಿದೆ ಅದನ್ನು ಬರಪೀಡಿತ ಪ್ರದೇಶ ಎಂದು ತೀರ್ಮಾನ ಮಾಡುತ್ತೇವೆ.

ಪ್ರೌಢ ಶಾಲೆಗಳಿರುವ ಕಡೆಗಳಲ್ಲೆಲ್ಲಾ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸುವ ಬಗ್ಗೆ

೯೨(೫೪೬) ಶ್ರೀ ಪಿ. ಬಿ. ಓಂಕಾರಮೂರ್ತಿ (ಕಡೂರು).— ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕಡೂರು ತಾಲ್ಲೂಕಿನಲ್ಲಿ ಸುಮಾರು ೨೨ ಪ್ರೌಢಶಾಲೆಗಳಿರುವುದು ನಿಜವಲ್ಲವೆ ?

ಆ) ಆ ಪೈಕಿ ಚೌಳಿ ಹಿರಿಯೂರು, ಯಗಟಿ, ಖಿದರ ಮುಂತಾದ ಸ್ಥಳಗಳಲ್ಲಿ ವಿದ್ಯಾರ್ಥಿ ನಿಲಯಗಳಿಲ್ಲದಿರುವ ಬಗ್ಗೆ ಸಾರ್ವಜನಿಕರಿಂದ ಅದರ ಮಂಜೂರಾತಿಗಾಗಿ ಕೋರಿ ಅರ್ಜಿ ಬಂದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು?

ಈ) ಪ್ರೌಢಶಾಲೆಗಳಿರುವ ಕಡೆಗಳಲ್ಲೆಲ್ಲಾ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುವುದು ಸರ್ಕಾರದವರ ನಿಲುವಲ್ಲವೇ ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು):—

ಅ) ಕಡೂರು ತಾಲ್ಲೂಕಿನಲ್ಲಿ ೩೬ ಪ್ರೌಢಶಾಲೆಗಳಿವೆ.

ಆ) ಚೌಳಿ ಹಿರಿಯೂರು ಮತ್ತು ಯಗಟಿ ಗ್ರಾಮಗಳಿಂದ ಮಂಜೂರಾತಿಗಾಗಿ ಬೇಡಿಕೆಗಳು ಬಂದಿವೆ. ಆದರೆ ಖಿದರ ಗ್ರಾಮದ ಬಗ್ಗೆ ಅರ್ಜಿ ಬಂದಿರುವುದಿಲ್ಲ.

ಇ) ಆಯವ್ಯಯದಲ್ಲಿ ಸಾಕಷ್ಟು ಹಣ ಒದಗಿಸಲು ಸಾಧ್ಯವಾಗದ ಕಾರಣ ಮಂಜೂರು ಮಾಡಲು ಸಾಧ್ಯವಾಗಿಲ್ಲ.

ಈ) ಆಯವ್ಯಯದಲ್ಲಿ ನಿಗದಿ ಮಾಡಿರುವ ಹಣವನ್ನು ಅನುಸರಿಸಿ ಹಂತ ಹಂತವಾಗಿ ಹೊಸ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಮಾಡಲಾಗುವುದು.